೩) ಸದರಿ ರೂ. ೪೩.೦೦ ಲಕ್ಷಗಳು ಸರ್ಕಾರದಿಂದ ಅಥವಾ ಹುಡ್ಕೋ ಸಂಸ್ಥೆ ನೆರವಿನಿಂದಾಗಲೀ ಬಿಡುಗಡೆಯಾದ ಹಣವಾಗಿರುವುದಿಲ್ಲ. ಇದು ವಾಣಿಜ್ಯ ಇಲಾಖೆಯಿಂದ ಮಂಡಳಿಯ ಯೋಜಿತ ವಾಣಿಜ್ಯ ಸಂಕೀರ್ಣದ ಬಾಡಿಗೆಯ ಬಗ್ಗೆ ನೀಡಲಾದ ಮುಂಗಡ ಹಣವಾದುದರಿಂದ ಬ್ಯಾಂಕಿನಲ್ಲಿಡಲಾಗಿದೆ.

REPAIRS TO TEMPLES OF BELUR TALUK.

628- Sri H. K.Kumara Swamy (Belur) will the Hon'ble Minister of State for Women and Child Development, Kannada and Cluture Department. we pleased to state?

a) *Is the Government aware of dilapidated conditions of temples of Belur Taluk under the Jurisdication of Archaeology Department?*

b) *If so, what actions have been taken up by the Government for their reparis?*

Smt. B.T. LALITHANAYAK (Minister of State for Women and Child Development and Kannada and Culture Department.

a) Yes.

b) The Veerabhadra Temple of Halebid, Chatteswara Temple, Chattchattanahalli of Belur Taluk are declared as State Protected Monuments. Some portions of these temples have been conserved far. Conservation of these temples will be taken up in due course depending upon the budgetary grants.

ಸುರತ್ಕಲ್ ಕ್ಷೇತ್ರದಲ್ಲಿ ಕೈಗಾರಿಕೆಗಳಿಂದುಂಟಾಗುತ್ತಿರುವ ಪರಿಸರ ಮಾಲಿನ್ಯದ ತಡೆಗೆ ಕ್ರಮ.

೬೩೪-ಶ್ರೀ ಕುಂಬ್ಳೆ ಸುಂದರ್ ರಾವ್(ಸುರತ್ಕಲ್) ಮಾನ್ಯ ಸಕ್ಕರೆ, ಜವಳಿ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) *ಸುರತ್ಕಲ್ ಕ್ಷೇತ್ರದಲ್ಲಿ ಪರಿಸರ ನಿಯಂತ್ರಣ ಮಂಡಳಿಯವರು ಪರವಾನಿಗೆ ನೀಡಿದ ಕೈಗಾರಿಕೆಗಳು ಎಷ್ಟು?*

ಆ) *ಪರಿಸರ ಮಾಲಿನ್ಯವನ್ನು ತಡೆಗಟ್ಟಲು ಮಂಡಳಿಯ ನಿಯಮಾನುಸಾರ ಎಲ್ಲಾ ಕ್ರಮಗಳನ್ನು ಅವುಗಳಲ್ಲಿ ಅಳವಡಿಸಲಾಗಿದೆಯೇ?*

ಇ) ದಕ್ಷಿಣ ಕನ್ನಡ ಜಿಲ್ಲೆಗೆ ಪರಿಸರ ಮಾಲಿನ್ಯವನ್ನುಂಟು ಮಾಡುವ ಕೈಗಾರಿಕೆಗಳನ್ನು ಬರಮಾಡಿಕೊಳ್ಳಬಾರದು ಎಂಬ ಬಗ್ಗೆ ಪರಿಸರ ವಿಜ್ಞಾನಿಗಳು ಅಭಿಪ್ರಾಯವನ್ನು ನೀಡಿರುವುದು ನಿಜವೇ? ಹೌದಾದಲ್ಲಿ ಆ ಬಗ್ಗೆ ಸರ್ಕಾರದವರ ನಿಲುವು ಏನು?

ಶ್ರೀ ಪಿ.ಸಿ. ಸಿದ್ದನಗೌಡರ್ (ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ರಾಜ್ಯ ಸಚಿವರು).

ಅ) ನೂರ ಇಪ್ಪತ್ತು ಮೂರು ಕಾರ್ಖಾನೆಗಳಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಪರವಾನಿಗೆ ನೀಡಿರುತ್ತದೆ.

ಆ) ಎಲ್ಲಾ ಕೈಗಾರಿಕೆಗಳು ಸಾಮಾನ್ಯವಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ನಿಗದಿಪಡಿಸಿರುವ ನಿಯಮಾನುಸಾರ ಎಲ್ಲಾ ಕ್ರಮಗಳನ್ನು ಕೈಗೊಂಡಿದೆ. (ಕಾರ್ಖಾನೆಗಳ ಪಟ್ಟಿ ಲಗತ್ತಿಸಿದೆ).

ಇ) ದಕ್ಷಿಣ ಕನ್ನಡ ಜಿಲ್ಲೆಗೆ ಪರಿಸರ ಮಾಲಿನ್ಯವನ್ನುಂಟು ಮಾಡುವ ಕೈಗಾರಿಕೆಗಳನ್ನು ಬರಮಾಡಿಕೊಳ್ಳಬಾರದು ಎಂಬ ಬಗ್ಗೆ ಪರಿಸರ ವಿಜ್ಞಾನಿಗಳು ಹಾಗೂ ಪರಿಸರವಾದಿಗಳ ಅಭಿಪ್ರಾಯ ಪಟ್ಟಿರುವುದು ನಿಜ. ಅದೇ ಕಾರಣದಿಂದ ಪರಿಸರ ಇಲಾಖೆಯ ಮಾಲಿನ್ಯವನ್ನುಂಟುಮಾಡುವ ಉದ್ದಿಮೆಗಳಿಗೆ ಪರವಾನಗೆ ಕೊಡುವ ಮುನ್ನ ವಿವರವಾಗಿ ಪರಿಶೀಲಿಸಿ ಅತ್ಯಂತ ಸುರಕ್ಷಣಾ ಕ್ರಮಗಳನ್ನು ಅಳವಡಿಸುವ ಉದ್ದಿಮೆಗಳಿಗೆ ಮಾತ್ರ ಅನುಮತಿ ನೀಡುತ್ತಿದೆ.

ಅನುಬಂಧ

ಸುರತ್ಕಲ್ ಕ್ಷೇತ್ರದಲ್ಲಿ ಮಂಡಳಿಯ ಹತ್ತು ಬೃಹತ್ ೧೭ ಮಧ್ಯಮ ಮತ್ತ ೯೬ ಸಣ್ಣ ಕೈಗಾರಿಕೆಗಳಿಗೆ ಸಮ್ಮತಿಯನ್ನು ನೀಡಿದೆ. ಈ ಒಟ್ಟು ೧೨೩ ಕಾರ್ಖಾನೆಗಳಲ್ಲಿ ಸಾಮಾನ್ಯವಾಗಿ ಎಲ್ಲಾ ಕಾರ್ಖಾನೆಯ ಮಂಡಳಿಯ ನಿಗದಿಪಡಿಸಿರುವ ಕ್ರಮಗಳನ್ನು ಅಳವಡಿಸಿದೆ. ಈ ಕಾರ್ಖಾನೆಗಳ ಹೆಸರು ಮತ್ತು ಉತ್ಪನ್ನಗಳ ವಿವರ ಕೆಳಕಂಡಂತೆ ಇದೆ.

ಕ್ರ.ಸಂ.	ಕಾರ್ಖಾನೆಯ ಹೆಸರು		ಉತ್ಪಾದಿಸುವ ವಸ್ತು
೧	ಮಂಗಳೂರು ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ಸ್, ಪೆಣಂಬೂರು	-	ಯೂರಿಯಾ ಮತ್ತು ಅಮೋನಿಯ
೨	ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿ. ಮತ್ತು ವಿತರಣಾ ಘಟಕ	-	ಪೆಟ್ರೋಲಿಯಂ ಪ್ರಾಡಕ್ಟ್ ಶೇಖರಣೆ
೩	ಕುದುರೆಮುಖ ಕಬ್ಬಿಣ ಅದಿರು ಕಾರ್ಖಾನೆ	-	ಕಬ್ಬಿಣದ ಅದಿರು ಪೆಲೆಟ್ಸ್ ಮತ್ತು ಕಾನ್ ಸನ್ ಟ್ರೇಟ್ ಕೇಕ್
೪	ಭಾರತ ಪೆಟ್ರೋಲಿಯಂ ಕಾರ್ಪೊರೇಷನ್-ಲಿಮಿಟೆಡ್	-	ಎಲ್ ಪಿ ಬಿ ಫಿಲಿಂಗ್ ಯೂನಿಟ್.
೫	ಕೆನರಾ ಸ್ಟೀಲ್ಸ್		೧. ಎಂಎಸ್ ಬಿಲೆಟ್ಸ್, ೨. ಸ್ಟೀಲ್ ಕ್ಯಾಸ್ಟಿಂಗ್ಸ
೬	ಕಾನ್ ಬೇ ಫಾಲಿಫಿಲಂಮ್ಸ್		೧. ಮೆಟ್ಯಾಲಿಕ್ ಫಿಲಮ್ಸ್ ಫಾರ್ ಕೆಪಾಸಿಟರ್ಸ್ ೨. ಟ್ರಿಪಲ್ ಲ್ಯಾಮಿನೇಟರ್ ೩. ಸರ್‌ಫೇಸ್ ಪ್ರಿಂಟಿಂಗ್
೪.	ಟು ಲೇಯರ್ ಲ್ಯಾಮಿನೇಟರ್ಸ್		
೭	ಪಾಲಮಾ ಲ್ಯಾಬೋರೇಟರೀಸ್-	-	ಬಲ್ಕ್ ಡ್ರಗ್ಸ್
೮	ಹಿಂದೂಸ್ತಾನ್ ಗ್ಯಾಸ್ ಮತ್ತು ಇಂಡಸ್ಟ್ರೀಸ್	-	ಸಾರಜನಕ
೯	ಮಂಗಳೂರು ರಿಫೈನರಿ ಮತ್ತು ಪೆಟ್ರೊ ಕೆಮಿಕಲ್ಸ್ ಲಿ.	-	ಪೆಟ್ರೋಕೆಮಿಕಲ್ಸ್ ರೀಫೈನರಿ.
೧೦.	ಬಿ.ಎ.ಎಸ್.ಎಫ್.	-	ಡೈಸ್ ಅಂಡ್ ಬೈಂಡರ್ಸ ಟ್ಯಾನಿಂಗ್ ಏಜಂಟ್ಸ

(ಉದ್ದಿಮೆ ಸ್ಥಳಕ್ಕೆ ಅನುಮತಿ ನೀಡಿದೆ)

ಮಧ್ಯಮ ಕಾರ್ಖಾನೆಗಳು

೧	ಕೆನರಾ ವರ್ಕ್‌ಶಾಪ್ ಲಿಮಿಟೆಡ್	-	ಎಸ್.ಎಸ್. ಬಾರ್ಸ್ ಸ್ಪ್ರಿಂಗ್ಸ್ ಇತ್ಯಾದಿ
೨	ಹಿಂದೂಸ್ಥಾನ್ ಲೀವರ್ ಲಿಮಿಟೆಡ್	-	ಸಾಬೂನು ಉತ್ಪನ್ನ

೩	ಫ್ಲಗ್ಸಾನ್ ಸಸ್ ಪೆನ್ಷನ್ ಪ್ರಾಡೆಕ್ಟ್ ಲಿ.	ಆಟೋಮೊಬೈಲ್ಸ ಲೀಫ್ ಸ್ಪ್ರಿಂಗ್ಸ್
೪	ಗ್ವಾಸ್ಪ ಕ್ವಾಲಿಟಿ ಕ್ಯಾಸ್ಟಿಂಗ್ಸ್	ಆಲಾಯ್ ಸ್ಟೀಲ್ ಕ್ಯಾಸ್ಟಿಂಗ್ಸ್
೫	ಮಹಾಲಾಸ ಗ್ಯಾಸನ್ ಅಂಡ್ ಕೆಮಿಕಲ್ಸ	ಲಿಕ್ವಿಡ್ ಇಂಗಾಲ.
೬	ಲ್ಯಾಮಿನಾ ಸಸ್ ಪೆನಷನ್ ಪ್ರಾಡಕ್ಟ	ಸ್ಪ್ರಿಂಗ್ ಲೀವ್ಸ್
೭	ಸೋಮಯ್ಯ ಜಿ ಸಿರಾಮಿಕ್ಸ್ ಪ್ರೈ ಲಿ	ಸ್ಟೋನ್ ವೇರ್ ಪೈಪ್ಸ ಉತ್ಪಾದನೆಯಾಗುತ್ತದೆ.
೮	ಸುಪರ್ ನಿತ ಬೀವರೀಜಸ್	ಆಹಾರ ಪಾನೀಯಗಳು
೯	ಉದ್ಯಾನ್ ಮೆರೈನ್ ಪ್ರಾಡೆಕ್ಟ	ಸೀಗಡಿ ಮತ್ತು ಮೀನುಗಳ ಸಂಸ್ಕರಣೆ.
೧೦	ಎಂ ಜೆ ಡಿಸ್ಟಿಲರೀಸ್	ಐ ಎಂ ಎಲ್ ಬಾಟ್ಲಿಂಗ್.
೧೧	ಆಚಲ್ ಇಂಡಸ್ಟ್ರೀಸ್	ಗೊಡಂಬಿ ಸಂಸ್ಕರಣೆ
೧೨	ಹಿಂದನಿಪ್ಪನ್ ರೂರಲ್ ಇಂಡಸ್ಟ್ರೀಸ್	ಗ್ರಾನೈಟ್ ಕಲ್ಲು ಉದ್ಯಮ
೧೩	ಪಂಚಮಾಲ್ ಪ್ಲಾಸ್ಟಿಂಕ್ ಇಂಡಸ್ಟ್ರೀಸ್	ಪಿ ವಿ ಸಿ ಪೈಪ್ಸ
೧೪	ಆಸ್ಪಿನ್ ವಾಲ್ ಅಂಡ್ ಕಂ.ಲಿ.	ಕಾಫಿ ಕ್ಯೂರಿಂಗ್
೧೫	ಪ್ಯಾರಡೈಸ್ ಸ್ಟೋನ್ ಎಕ್ಸ್‌ಪೋರ್ಟಿಂಗ್	ಟೊಮ್ಯಾ ಸ್ಟೋನ್ಸ್ ಕಂಪನಿ ಲಿ.
೧೬	ಗುರುದೇವ್ ಪ್ಲಾಸ್ಟಿಕ್	ಪ್ಲಾಸ್ಟಿಕ್ ಬ್ಯಾಗ್ಸ್ ಮತ್ತು ಶೀಟ್ಸ್
೧೭	ಆಶೀರ್ವಾದ್ ಪಾಲಿಸ್ಯಾಕ್ಸ್ ಲಿ.	ಪ್ಲಾಸ್ಟಿಕ್ ಬ್ಯಾಗ್ ಮತ್ತು ಶೀಟ್ಸ್

ಇದಲ್ಲದೆ ೯೬ ಸಣ್ಣ ಮತ್ತು ಅತಿ ಸಣ್ಣ ಪ್ರಮಾಣದ ಕೈಗಾರಿಕೆಗಳು ಇವೆ.

ರಾಜ್ಯದಲ್ಲಿರುವ ನೂಲು ವಿತರಣಾ ಕೇಂದ್ರಗಳು

೧೩೬೮ - ಶ್ರೀ ಕುಂಬೆ ಸುಂದರರಾವ್ (ಸುರತ್ಕಲ್) ಮಾನ್ಯ ಸಕ್ಕರೆ, ಜವಳಿ, ತಂತ್ರಜ್ಞಾನ ಪರಿಸರ ಮಾಲಿನ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

೧) *ರಾಜ್ಯದಲ್ಲಿ ಇದುವರೆಗೂ ಸ್ಥಾಪಿಸಿರುವ ನೂಲಿನ ಕೇಂದ್ರಗಳು ಎಷ್ಟು? ಅವುಗಳನ್ನು ಸ್ಥಾಪಿಸಲಾಗಿರುವ ಸ್ಥಳಗಳಾವುವು?*

೨) *ನೂಲಿನ ಕೇಂದ್ರಗಳ ಮೂಲಕ ಇದುವರೆಗೂ ವಿತರಿಸಲಾಗಿರುವ ಒಟ್ಟು ನೂಲಿನ ಮೊತ್ತ ಎಷ್ಟು?*

೩) *ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೇಕಾರರ ಬೇಡಿಕೆಯಂತೆ ೨೦,೪೦,೬೦,೮೦ ಕೌಂಟ್‌ಗಳ ನೂಲನ್ನು ವಿತರಿಸಲಾಗಿದೆಯೇ? ವಿತರಿಸಿದ್ದಲ್ಲಿ ವಿವರಗಳೇನು?*

೪) *ಜಿಲ್ಲೆಯಲ್ಲಿ ನೇಕಾರರ ಬೇಡಿಕೆಗನುಗುಣವಾಗಿ ನೂಲನ್ನು ವಿತರಿಸುವ ಬಗ್ಗೆ ಸರ್ಕಾರದವರು ಕ್ರಮಕೈಗೊಳ್ಳುವರೇ?*

೫) *ಈ ಕೇಂದ್ರಗಳ ಮೂಲಕ ವಿತರಿಸುವ ನೂಲಿನ ಪ್ರಮಾಣಕ್ಕೆ ಮಿತಿಯನ್ನು ವಿಧಿಸಲಾಗಿದೆಯೇ? ವಿಧಿಸಲಾಗಿದ್ದಲ್ಲಿ ಅದರ ಪ್ರಮಾಣವೆಷ್ಟು ಸಹಕಾರಿ ಸಂಘಗಳಿಗೆ ಅವುಗಳ ಬೇಡಿಕೆಗೆ ಅನುಗುಣವಾಗಿ ನೂಲನ್ನು ವಿತರಿಸಲು ಸರ್ಕಾರವು ಮುಂದಾಗುವುದು ಸೂಕ್ತವೆಂದು ಸರ್ಕಾರ ಕ್ರಮ ಕೈಗೊಳ್ಳುವುದೇ?*